


**ಬೀದರ್ ಭಾರತೀಯ ವಾಯುಸೇನೆಯ ವಿಮಾನ ನಿಲ್ದಾಣ**

2024ರ ಫೆಬ್ರುವರಿಯಲ್ಲಿ ಒಟ್ಟು ಪ್ರಯಾಣಿಕರು

**16,507**

ಶೇ. **62.8**ರಷ್ಟು ಏರಿಕೆ.

ಬೀದರ್–ಬೆಂಗಳೂರು ನಡುವೆ ಉಡಾನ್ ಯೋಜನೆಯಲ್ಲಿ ವಿಮಾನ ಹಾರಾಟದಿಂದಾಗಿ ಪ್ರಯಾಣಿಕರ ಸಂಖ್ಯೆಯಲ್ಲಿ ಹೆಚ್ಚಳ.

ಬೆಂಗಳೂರಿನ ನಂತರ ಉತ್ತಮ ಸಂಚಾರ ದಟ್ಟಣೆ ಹೊಂದಿರುವ ಮಂಗಳೂರು ವಿಮಾನ ನಿಲ್ದಾಣ



ವಿಮಾನಯಾನ ಕಂಪನಿಗಳ ಹಿನ್ನಡೆಗೆ ಹಲವು ಕಾರಣಗಳಿವೆ. ಅವುಗಳಲ್ಲಿ ಪ್ರಮುಖ ಕಾರಣಗಳನ್ನು ಗುರ್ತಿಸುವುದಾದರೆ:

- ಇಂಧನ: ಭಾರತದಲ್ಲಿ ವಿಮಾನ ನಡೆಸುವುದು ಎಂದರೆ, ಟರ್ಬೈನ್ ಇಂಧನ ವೆಚ್ಚವೇ ಶೇ. 50ರಿಂದ 70ರಷ್ಟು ಆಗಲಿದೆ. ಇದರೊಂದಿಗೆ ತೆರಿಗೆ ಪಾಲು ಶೇ. 30ರಷ್ಟಿದೆ. ಇದರೊಂದಿಗೆ ಆಮದು ಸುಂಕ ಮತ್ತೊಂದು ಹೊರೆ.
- ಡಾಲರ್ ಮೇಲಿನ ಅವಲಂಬನೆ: ಡಾಲರ್ ಎದುರು ರೂಪಾಯಿ ಮೌಲ್ಯದ ಏರಿಳಿತವೂ ಈ ಕ್ಷೇತ್ರದ ಮೇಲೆ ಅನಿರೀಕ್ಷಿತ ಪರಿಣಾಮ ಉಂಟಾಗುತ್ತಿದೆ. ಇದರಲ್ಲಿ ವಿಮಾನಗಳ ಖರೀದಿ, ನಿರ್ವಹಣೆ, ಗುತ್ತಿಗೆ ಮೊತ್ತ ಇದೆಲ್ಲವೂ ಡಾಲರ್ ಮೇಲೆಯೇ ಅವಲಂಬಿಸಿರುತ್ತದೆ.
- ಸ್ಪರ್ಧಾತ್ಮಕ ಬೆಲೆ: ಭಾರತದಂತಹ ಮಾರುಕಟ್ಟೆಯಲ್ಲಿ ಟಿಕೆಟ್ ಬೆಲೆ ಸಮರ ಸಹಜ. ದೊಡ್ಡ ಗ್ರಾಹಕರನ್ನು ಸೆಳೆಯಬೇಕೆಂದರೆ, ಬೆಲೆ ತಗ್ಗಿಸುವ ತಂತ್ರವನ್ನು ವಿಮಾನಯಾನ ಕಂಪನಿಗಳು ಆಗಾಗ ಅನುಸರಿಸುತ್ತಲೇ ಇರುತ್ತವೆ. ನಿರ್ವಹಣೆ ವೆಚ್ಚ ನಿರೀಕ್ಷೆಗೂ ಮೀರಿ ಅಧಿಕವಾಗಿದ್ದರೆ ಟಿಕೆಟ್ ಬೆಲೆ ಕಡಿತವು, ಕಂಪನಿಯ ಲಾಭ ನಷ್ಟದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿವೆ.

## ವಿಶ್ವದಲ್ಲೇ ವೇಗದ ಬೆಳವಣಿಗೆ

ಭಾರತದ ವಾಯುಯಾನ ಕ್ಷೇತ್ರವು ಜಗತ್ತಿನಲ್ಲೇ ಅತ್ಯಂತ ವೇಗವಾಗಿ ಬೆಳೆಯುತ್ತಿರುವ ಉದ್ಯಮವಾಗಿದೆ. 2020ರಲ್ಲಿ ಇದರ ಒಟ್ಟು ಮೌಲ್ಯ 20 ಶತಕೋಟಿ ಡಾಲರ್. 2027ರಲ್ಲಿ ಇದು ದ್ವಿಗುಣಗೊಳ್ಳುವ ನಿರೀಕ್ಷೆ ಇದೆ. ಭಾರತದಲ್ಲಿ ಸದ್ಯ 137 ವಿಮಾನ ನಿಲ್ದಾಣಗಳಿವೆ. ಇದರಲ್ಲಿ 103 ಡೊಮೆಸ್ಟಿಕ್ ವಿಮಾನ ನಿಲ್ದಾಣಗಳು. 24 ಅಂತರರಾಷ್ಟ್ರೀಯ ವಿಮಾನ ನಿಲ್ದಾಣಗಳು ಹಾಗೂ 10 ಕಸ್ಟಮ್ಸ್ ನಿಲ್ದಾಣಗಳು.

2022ರಲ್ಲಿ 123.2 ಮಿಲಿಯನ್ ಪ್ರಯಾಣಿಕರು ಭಾರತದಲ್ಲಿ ವಿಮಾನದಲ್ಲಿ ಸಂಚರಿಸಿದ್ದಾರೆ. 2021ಕ್ಕೆ ಹೋಲಿಸಿದರೆ ಇದು ಶೇ. 47ರಷ್ಟು ಅಧಿಕ. 2023ರಲ್ಲಿ ಇದು ದಾಖಲೆ ಮಟ್ಟಕ್ಕೆ ತಲುಪಿದೆ. 2023ರಲ್ಲಿ ಒಂದೇ ದಿನ ಸರಾಸರಿ 2,978 ಹಾರಾಟಗಳು ದೇಶದ ವಾಯುನಕ್ಷೆಯಲ್ಲಿ ನಡೆದ ಉದಾಹರಣೆ ಇದೆ. ಹಾಗೆಯೇ ಒಂದೇ ದಿನ 4.56 ಲಕ್ಷ ಜನ ಪ್ರಯಾಣಿಸಿದ್ದಾರೆ. ಇಲ್ಲಿ ಗಮನಿಸಬೇಕಿರುವುದು, ಇಷ್ಟು ಹಾರಾಟ ಮತ್ತು ಇಷ್ಟು ಜನರನ್ನು ಹೊತ್ತು ಸಾಗಿದ್ದು ಕೇವಲ 671 ವಿಮಾನಗಳು ಮಾತ್ರ. ಅವುಗಳಲ್ಲಿ ಸಪೂರ ದೇಹದ ಜೆಟ್‌ಗಳೇ ಹೆಚ್ಚು. ಇವುಗಳಲ್ಲಿ 275 ಇಂಡಿಗೊ ವಿಮಾನಗಳು. 117 ಏರ್ ಇಂಡಿಯಾ, 90 ಸ್ಪೈಸ್‌ಜೆಟ್, 58 ಗೋ ಏರ್, 50 ವಿಸ್ತಾರಾ, 28 ಏರ್ ಏಷ್ಯಾ ಇಂಡಿಯಾ, 24 ಏರ್ ಇಂಡಿಯಾ ಎಕ್ಸ್‌ಪ್ರೆಸ್, 18 ಅಲಯಾನ್ಸ್ ಏರ್ ವಿಮಾನಯಾನ, 6 ಬ್ಲೂಡಾರ್ಟ್, 5 ಸ್ಟಾರ್ ಏರ್, 2 ಫ್ಲೈ ಬಿಗ್, 1 ಏರ್ ಟ್ಯಾಕ್ಸಿ ಕಂಪನಿಗಳ ವಿಮಾನಗಳು ಸೇರಿವೆ.

ಪ್ರಯಾಣಿಕರ ಬೇಡಿಕೆಗೆ ಅನುಗುಣವಾಗಿ ಏರ್ ಇಂಡಿಯಾ ಮತ್ತು ಇಂಡಿಗೊ ಸಂಸ್ಥೆಗಳು ಹೆಚ್ಚಿನ ಸಂಖ್ಯೆಯ ವಿಮಾನಗಳ ಖರೀದಿಗೆ ಮುಂದಾಗಿವೆ.

## ಸಂಪರ್ಕ ಕೊಂಡಿಯಾಗಲಿದೆಯೇ ಬೆಂಗಳೂರು?

ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವು 2035ರ ಹೊತ್ತಿಗೆ 10 ಕೋಟಿ ಪ್ರಯಾಣಿಕರನ್ನು ನಿಭಾಯಿಸಬೇಕಿದೆ. ಹೀಗಾಗಿ 'ಬಿಯಾಂಡ್ ಬೆಂಗಳೂರು' ಚಿಂತನೆ ಆರಂಭಗೊಂಡಿದೆ.

ಆರಂಭಗೊಂಡ 30 ವರ್ಷದೊಳಗೇ ಅತಿಯಾದ ದಟ್ಟಣೆಯಿಂದ ನಿರ್ವಹಣೆಯ ಹೊರೆಯನ್ನು ಬೆಂಗಳೂರಿನ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಎದುರಿಸುತ್ತಿದೆ. ಕೋವಿಡ್‌ಗೂ